ಮೊದಲನೆಯದಾಗಿ ಪೋಷಕರಿಗೆ ಅರಿವು ಮೂಡಿಸುವುದು ಬಹಳ ಮುಖ್ಯ.

'ಮುಟ್ಟು' ಎಂಬ ಪ್ರಕ್ರಿಯೆಗೂ ಧಾರ್ಮಿಕ ವಿಚಾರಗಳಿಗೂ ನೇರವಾದ ಸಂಬಂಧ ಇರುವುದರಿಂದ ಹೆಚ್ಚಿನ ಸಂದರ್ಭಗಳಲ್ಲಿ ತಪ್ಪು ಕಲ್ಪನೆಗಳು ಸೃಷ್ಟಿಯಾಗುತ್ತವೆ. ಧಾರ್ಮಿಕ ಆಚರಣೆಗಳನ್ನು ನಿರ್ವಹಿಸಲು ಮುಟ್ಟಾದ ಮಹಿಳೆಗೆ ಅವಕಾಶ ಇಲ್ಲ ಎಂಬ ನಂಬಿಕೆ ಬಲವಾಗಿರುವ ಕಾರಣಕ್ಕೇ ಆಕೆಯು ಕುಟುಂಬದೊಳಗೆ ಇರುವ ಶ್ರೇಣೀಕೃತ ವ್ಯವಸ್ಥೆಯಲ್ಲಿ, 'ಆ ಮೂರು ದಿನ'ಗಳಲ್ಲಿ ಕೊನೆಯ ಸ್ಥಾನದಲ್ಲಿ ನಿಲ್ಲಬೇಕಾಗುತ್ತದೆ. ಇಂದು ಮುಟ್ಟಿನ ಸಂದರ್ಭದ ಅಸ್ಪೃಶ್ಯತೆಯು ನಗರಗಳಲ್ಲಿ ಕೊಂಚಮಟ್ಟಿಗೆ ಕಡಿಮೆ ಆಗಿರಬಹುದಾದರೂ ಧಾರ್ಮಿಕ ಕ್ಷೇತ್ರದಲ್ಲಿ ಬದಲಾವಣೆಗಳನ್ನು ತರುವುದು ಸಾಧ್ಯವಾಗಿಲ್ಲ.

## ಕಾನೂನು ಮಾತ್ರ ಸಾಲದು

ಆಚರಣೆಗಳಿಗೆ ಸಂಬಂಧಿಸಿದ ವೈಜ್ಞಾನಿಕ ವಿಚಾರಗಳನ್ನು ತಿಳಿಸುವ ಪ್ರಕ್ರಿಯೆಯನ್ನು ಪೋಷಕರ ಮನಸ್ಥಿತಿ ಗಮನಿಸಿ ನಿರ್ಧರಿಸಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಸಾಮಾನ್ಯವಾಗಿ ಭದ್ರವಾದ ಧಾರ್ಮಿಕ ನಂಬಿಕೆಗಳನ್ನು ಹೊಂದಿರುವ ಪೋಷಕರ ಬಳಿ, ಋತುಚಕ್ರ ಎಂದರೇನು, ಆ ಸಂದರ್ಭದಲ್ಲಿ ಹುಡುಗಿಯರನ್ನು ಆಧರಿಸಬೇಕಾದ ಬಗೆ ಹೇಗೆ, ಅವರನ್ನು ಅಸ್ಪೃಶ್ಯರೆಂದು ಪರಿಗಣಿಸಿ ದೂರ ಕುಳ್ಳಿರಿಸಿದರೆ ಅವರ ಮಾನಸಿಕತೆಯ ಮೇಲಾಗುವ ಪರಿಣಾಮಗಳೇನು ಎಂಬುದನ್ನು ವಿವರಿಸಬಹುದು. ಈ ಎಲ್ಲ ಮಾಹಿತಿಗಳು ಸರಳ ಮತ್ತು ಸತ್ಯವಾದ ವಿಚಾರಗಳಾದರೂ ಅವರ ಮನಸ್ಥಿತಿ ಬದಲಾಗುತ್ತದೆ ಎಂದು ಹೇಳುವಂತಿಲ್ಲ. ಅಂತಹ ಸಂದರ್ಭಗಳಲ್ಲಿ ತಾರ್ಕಿಕ ವಿಚಾರಗಳನ್ನು ವಿವರಿಸಿ ಅವರಿಗೆ ತಿಳಿ ಹೇಳುವುದು ಉತ್ತಮವೆನಿಸುತ್ತದೆ.

'ಈಗಿನ ಕಾಲಮಾನದಲ್ಲಿ ಎಲ್ಲರೂ ಬಸ್ಸಿನಲ್ಲಿ ಪ್ರಯಾಣಿಸುವುದು ಸರಿಯಷ್ಟೇ. ಎಷ್ಟೋ ಜನರು ಇಂದಿನ ಸಂದರ್ಭದಲ್ಲಿ ಋತುಚಕ್ರದ ಸಂದರ್ಭದಲ್ಲಿ ಪ್ರತ್ಯೇಕವಾಗಿ ಮನೆಯಲ್ಲಿಯೇ ಕುಳಿತುಕೊಳ್ಳುವುದಿಲ್ಲ. ಹಾಗಿದ್ದರೆ ನಮ್ಮ ಮನೆ ಮಗಳು ಮಾತ್ರ ಏಕೆ ಮನೆಯಲ್ಲಿಯೋ, ಶಾಲೆಯಲ್ಲಿಯೋ ಪ್ರತ್ಯೇಕವಾಗಿ ಕುಳಿತುಕೊಳ್ಳಬೇಕು? ಶಾಲೆಗೆ ಬರುವ ಶಿಕ್ಷಕಿಯರು ಹೀಗೆ ರಜೆ ಹಾಕುವ ಪರಿಪಾಟವಿದೆಯೇ? ಅಂದರೆ ವಿದ್ಯಾರ್ಥಿನಿಯರು ಏಕೆ ಮನೆಯಲ್ಲಿಯೇ ಇರಬೇಕು ಎಂದು ಬಯಸುತ್ತೀರಿ' ಎಂಬ ತರ್ಕವನ್ನು ವಿವರಿಸಿದರೆ ಹೆಚ್ಚು ಪ್ರಯೋಜನ ಆಗಬಹುದೇನೋ. ಈ ತರ್ಕದ ಚುಂಗು ಹಿಡಿದು ಋತುಚಕ್ರದ ವಾಸ್ತವಿಕ ಸಂಗತಿಯನ್ನು ಇಷ್ಟಿಷ್ಟೇ ವಿವರಿಸುತ್ತ ಸಾಗಬಹುದು. ಏನೇ ಆಗಲಿ, ಋತುಚಕ್ರದ ಸಂದರ್ಭದಲ್ಲಿ ಅಸ್ಪೃಶ್ಯತೆಯಿಂದ ಪಾರಾಗುವ ಪ್ರಕ್ರಿಯೆಯು ಅರಿವಿನ ಫಲಿತಾಂಶವೇನೂ ಅಲ್ಲ' ಎಂದು ಹೇಳುತ್ತಾರೆ ಅಣಶಿ ಶಾಲೆಯ ಶಿಕ್ಷಕಿ ಹಾಗೂ ಲೇಖಕಿ ಅಕ್ಷತಾ ಕೃಷ್ಣಮೂರ್ತಿ.

### ಬಾಲ್ಯವಿವಾಹ ಎಂಬ ಆಪತ್ತು

ಬಾಲ್ಯವಿವಾಹ ನಡೆಯಲು ಸಾಮಜಿಕ, ಆರ್ಥಿಕ ಮುಂತಾದ ಕಾರಣಗಳು ಅನೇಕ ಇರಬಹುದು. ಆದರೆ ಎಲ್ಲದಕ್ಕೂ ಮುಖ್ಯವಾದ ಕಾರಣವೆಂದರೆ ಹೆಣ್ಣುಮಕ್ಕಳು ಪೋಷಕರ ಜವಾಬ್ದಾರಿ ಎಂಬ ಭಾವನೆ. ಅವರನ್ನು ಆದಷ್ಟು ಬೇಗ ಮದುವೆ ಮಾಡಿ ಕೊಡುವುದೇ ಹೆಣ್ಣು ಹೆತ್ತವರ ಕರ್ತವ್ಯ ಎಂಬ ಭಾವನೆ. ಸರ್ಕಾರ ಕೂಡ ಇದರ ಹಿಂದೆ ಇರುವ ಕಾರಣಗಳನ್ನು ಪತ್ತೆ ಮಾಡಲು ಪ್ರಯತ್ನಿಸಿದೆ. ಕೋವಿಡ್ ಸೋಂಕು ತಡೆಯಲು ಲಾಕ್ ಡೌನ್ ಹೇರಿದ್ದ ಸಂದರ್ಭದಲ್ಲಿ ಬಾಲ್ಯ ವಿವಾಹಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆದವು. ಬಡತನ, ಅನಕ್ಷರತೆ,ಮೂಢನಂಬಿಕೆ, ಅರಿವಿನ ಕೊರತೆ,ಶಿಕ್ಷಣದ ನಿರ್ಲಕ್ಷ್ಯ, ವೃದ್ಧರ ಹಾಗೂ ಅನಾರೋಗ್ಯದಲ್ಲಿರುವ ಹಿರಿಯರ ಆಸೆ ಮುಂತಾದ ಕಾರಣಗಳು ಇದರ ಹಿಂದೆ ಸೇರಿಕೊಂಡಿವೆ. ರಾಜ್ಯದಲ್ಲಿ ನಡೆದ ಬಾಲ್ಯವಿವಾಹ ಪ್ರಕರಣಗಳನ್ನು ಗಮನಿಸಿದರೆ 2020–21ರಲ್ಲಿ ರಾಜ್ಯದಲ್ಲಿ 296 ಬಾಲ್ಯ ವಿವಾಹ ಪ್ರಕರಣಗಳು ವರದಿಯಾಗಿದ್ದರೆ, 2021–22ರಲ್ಲಿ 418 ಪ್ರಕರಣಗಳು ವರದಿ ಆಗಿವೆ. 2022–23 ರಲ್ಲಿ 328 ಪ್ರಕರಣಗಳು ವರದಿ ಆಗಿವೆ. ಅಂದ್ರೆ 2020–21 ನೇ ಸಾಲಿಗಿಂತ 2022–23 ನೇ ಸಾಲಿನಲ್ಲಿ ಬಾಲ್ಯ ವಿವಾಹ ಪ್ರಕರಣಗಳು ಹೆಚ್ಚಾಗಿವೆ.



ಹಿಂದೆಲ್ಲ ಮನೆಗಳಲ್ಲಿ ಅನೇಕ ಮಹಿಳೆಯರು ಕೂಡು ಕುಟುಂಬದಲ್ಲಿ ಇದ್ದುದರಿಂದ ಮುಟ್ಟಿನ ಸಂದರ್ಭದಲ್ಲಿ ಮಹಿಳೆಯರು ಕೆಲಸ ಮಾಡಲು ಅವಕಾಶ ಇರುತ್ತಿರಲಿಲ್ಲ. ಆದರೆ ಯಾವಾಗ ಕುಟುಂಬಗಳು ವಿಘಟನೆಗೊಂಡವೋ, ಆಗ ಮನೆಯಲ್ಲಿ ಮಹಿಳೆಯರು ಮಾಡುವ ಕೆಲಸಗಳನ್ನು ಮಾಡಲು ಬದಲಿ ಯಾರೂ ಇರುವುದಿಲ್ಲ. ಅಲ್ಲದೆ ಮಹಿಳೆಯರು ಸಾಮಾಜಿಕ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವಾಗ, ಅವರ ಕೆಲಸಗಳನ್ನು ಮಾಡಲು ಬದಲಿ ಜನರನ್ನು ಇರಿಸುವುದು ಪ್ರಾಯೋಗಿಕವಾಗಿ ಸಾಧುವಲ್ಲ ಎನ್ನುವ ಕಾರಣಕ್ಕೋ ಏನೋ, ಎಷ್ಟೋ ಸಂದರ್ಭಗಳಲ್ಲಿ ಈ ಅಸ್ಪೃಶ್ಯತೆಯ ಆಚರಣೆಯು ಕಡಿಮೆಯಾಗುತ್ತಾ ಬಂದಿರಬಹುದು. ಆದಾಗ್ಯೂ ಮನೆಗಳಲ್ಲಿ ಧಾರ್ಮಿಕ ಆಚರಣೆಗಳಲ್ಲಿ ಇಂದಿಗೂ ಮಹಿಳೆಯರಿಗೆ ಅವಕಾಶಗಳು ಇರುವುದಿಲ್ಲ ಎನ್ನುವುದು ಅಕ್ಷತಾ ಅವರ ಅನಿಸಿಕೆ.

'ಬುಡಕಟ್ಟು ಸಮುದಾಯಗಳಲ್ಲಿ ಅಸ್ಪೃಶ್ಯತೆಯ ಆಚರಣೆಯು ತುಲನಾತ್ಮಕವಾಗಿ ಕಡಿಮೆ. ಅಲ್ಲಿ ಮಹಿಳೆಯರು ಎಲ್ಲ ದಿನಗಳಂತೆಯೇ ಮುಟ್ಟಿನ ದಿನಗಳಲ್ಲಿಯೂ ಕಾಡಿಗೆ ತೆರಳಿ ತಮ್ಮ ದುಡಿಮೆಯನ್ನು ಮುಂದುವರೆಸುತ್ತಾರೆ. ತಮ್ಮ ಮನೆಗಳಲ್ಲಿಯೂ ನಿರಾಳವಾಗಿ ಓಡಾಡಿಕೊಂಡಿರುತ್ತಾರೆಯೇ ಹೊರತು, ಪ್ರತ್ಯೇಕತೆಯ ಉಸಾಬರಿಗೆ ಹೋಗುವುದಿಲ್ಲ. ತುಸು ಶಿಕ್ಷಿತ ಸಮಾಜದಲ್ಲಿ ಇಂತಹ ಕಟ್ಟುಪಾಡುಗಳು ಹೆಚ್ಚಾಗಿರುತ್ತವೆ. ಇಂತಹ ಕಟ್ಟುಪಾಡುಗಳು ಹೆಚ್ಚಾದಷ್ಟೂ ಅದು ವಿದ್ಯಾರ್ಥಿನಿಯರ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತದೆ' ಎನ್ನುವುದು ಅಕ್ಷತಾ ಅವರ ಗಮನಿಸುವಿಕೆ.

ಮುಟ್ಟಾಗುವುದು ಹೆಣ್ಣಿನ ಜೀವನದ ಮಹತ್ವದ ಹಂತ. ಈ ಪ್ರಮುಖ ಘಟ್ಟವು ಮೂಢನಂಬಿಕೆಗಳ ದೆಸೆಯಿಂದಾಗಿ ಹೆಣ್ಣಿನ ಜೀವನದ ದಿಕ್ಕನ್ನೇ ಬದಲಿಸುವಂತಾಗಿದೆ. ಶಿಕ್ಷಣವೋ ಮದುವೆಯೋ ಎನ್ನುವ ಪ್ರಶ್ನೆಯು ನಗರಗಳಲ್ಲಿ ಹುಡುಗಿಯರಿಗೆ ಅಂದಾಜು 20–25 ವರ್ಷಗಳ ವಯೋಮಾನದಲ್ಲಿ ಎದುರಾದರೆ, ಗ್ರಾಮೀಣ ಪ್ರದೇಶಗಳಲ್ಲಿ ಮೂಢನಂಬಿಕೆಗಳಿಗೆ ಜೋತುಬಿದ್ದ ಕುಟುಂಬಗಳಲ್ಲಿರುವ ಹೆಣ್ಣುಮಕ್ಕಳು ಏನೂ ಅರಿಯದ ಹತ್ತೋ ಹನ್ನೆರಡೋ ವಯಸ್ಸಿನಲ್ಲಿ ಎದುರಿಸಬೇಕಾಗಿದೆ. ಹಾಗೆ ನೋಡಿದರೆ ಈ ಆಯ್ಕೆಯೇ ಅವರ ಮುಂದೆ ಇಲ್ಲವಾಗಿದೆ. ಮದುವೆಯ ಅರ್ಥ ತಿಳಿಯುವ ಮುನ್ನವೇ ಅವರು ಸಾಂಸಾರಿಕ ವರ್ತುಲದೊಳಗೆ ಹೋಗಿ ನಿಲ್ಲಬೇಕಾಗಿದೆ. ಹಾಗೊಂದು ವೇಳೆ ಮದುವೆಯಾದ ಬಳಿಕವೂ ಅವರ ಬಾಳುವೆ ನೆಮ್ಮದಿಯಿಂದ ಸಾಗುತ್ತದೆ ಎನ್ನುವಂತಿಲ್ಲ.

ಮುಟ್ಟಿನ ಕುರಿತು ಅರಿವು ಮೂಡಿಸುವ, ಅರಿವು ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಕ್ರಮಗಳು, ಯೋಜನೆಗಳು ಇನ್ನಷ್ಟು ಸಮರ್ಥವಾಗಿ ನಡೆಯಬೇಕಾಗಿದೆ. ಸರ್ಕಾರಿ ನೀತಿ ನಿರೂಪಕರು ಈ ಕುರಿತು ಗಮನ ಹರಿಸಬೇಕಾಗಿದೆ. ಅರಿವಿನ ಕಾರ್ಯಕ್ರಮಗಳು ಸರ್ಕಾರಿ ಶಾಲೆಗಳಿಗೆ ಸೀಮಿತವಾಗದೇ ಎಲ್ಲ ಶಾಲೆಗಳಲ್ಲಿಯೂ ಕಡ್ಡಾಯವಾಗಬೇಕಾಗಿದೆ. ಅತೀ ಮುಖ್ಯವಾಗಿ ಇಂತಹ ಕಾರ್ಯಕ್ರಮಗಳನ್ನು ಪುರುಷರಿಗೆಂದೇ ವಿಶೇಷವಾಗಿ ಆಯೋಜಿಸಬೇಕಾಗಿದೆ.

ಪ್ರತಿಕ್ರಿಯಿಸಿ: feedback@sudha.co.in